21	– " –	ಹರೀಶ್ ಗಟ್ಟಿ ಬಿನ್ ತಿಮ್ಮಪ್ಪ ಗಟ್ಟಿ ಮೂಕನಡು ಗ್ರಾ; ಭಂಟ್ವಾಳ ತಾ॥	– " –
22	– " –	ಅಮ್ಮಣ್ಣ ಶೆಟ್ಟಿ ಬಿನ್ ಕುಂಜ್ಞಣ್ಣ ಶೆಟ್ಟಿ ಹಾಗೂ ಇತರರು, ಮೂಡುಪಡುಕೊಂಡಿ ಗ್ರಾ; ಭಂಟ್ವಾಳ ತಾ॥	ಸಾಮೂಹಿಕ
ಬಿಜಾಪುರ ಜಿಲ್ಲೆ			
23	ಬ.ಬಾಗೇವಾಡಿ	ರಮೇಶ್ ಬಿನ್ ಲಕ್ಕಪ್ಪ, ಸಿಂಧಗೇರಿ ಗ್ರಾಮ, ಹೂವಿನಹಿಪ್ಪರಗಿ ಹೋ; ಬ.ಬಾಗೇವಾಡಿ ತಾ॥	ವೈಯಕ್ತಿಕ

182 ಡಾ॥ ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಔಷಧಿಗಳ ಖರೀದಿಗಾಗಿ ದರ ಗುತ್ತಿಗೆ (Rate Contract) ಸಮಗ್ರ ನೀತಿಯನ್ನು ದಿನಾಂಕ: 23/10/2009 ರಂದು ಜಾರಿಗೊಳಿಸಿ ನಂತರ ಈ ಆದೇಶವನ್ನು ಹಿಂದಕ್ಕೆ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಆದೇಶವನ್ನು ಹಿಂದಕ್ಕೆ ಪಡೆಯಲು ಕಾರಂಗಳೇನು; (ವಿವರ ನೀಡುವುದು)

ಇ) ಕಳೆದ 10 ವರ್ಷಗಳಿಂದ ನಡೆಸುತ್ತಿರುವ ದರ ಗುತ್ತಿಗೆಯನ್ನು ಕೈಬಿಟ್ಟು ಟೆಂಡರ್ (Tender) ಮುಖಾಂತರ ಔಷಧಿಗಳನ್ನು ಖರೀದಿಸುವು ದರಿಂದ ಸರ್ಕಾರಕ್ಕೆ ಆಗುವ ಅನುಕೂಲತೆಗಳು ಯಾವುವು;

ಈ) ಸರ್ಕಾರದ ಈ ದ್ವಿಮುಖ ನೀತಿಯಿಂದ ಔಷಧಿ ಖರೀದಿಯಲ್ಲಿ ತೊಂದರೆಯಾಗಿಲ್ಲವೇ?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಬಂದಿದೆ

ಆ) ಈ ಆದೇಶವನ್ನು ಹಿಂಪಡೆಯಲು ಕೆಳಕಂಡವು ಪ್ರಮುಖ ಕಾರಣಗಳಾಗಿವೆ:

1. ದರ ಗುತ್ತಿಗೆ ನಿಗದಿಪಡಿಸುವ ಮೂಲಕ ಔಷಧಿ ಮತ್ತು ರಾಸಾಯನಿಕಗಳನ್ನು ಸಂಗ್ರಹಣೆ ಮಾಡಿದರೆ, ಸರಬರಾಜು ದಾರರು ತಮಗೆ ಅನುಕೂಲಕರವಾದ ಔಷಧಿ ಮತ್ತು ಸಾಮಾಗ್ರಿಗಳನ್ನು ಮಾತ್ರ ಸರಬರಾಜು ಮಾಡಲು ಮುಂದೆ ಬರುವುದಲ್ಲದೇ ಇಲಾಖೆ ಅವಶ್ಯವಿರುವ ಎಲ್ಲಾ ಔಷಧಿ ಮತ್ತು ರಾಸಾಯನಿಕಗಳನ್ನು ಸರಬರಾಜು ಮಾಡುವುದಿಲ್ಲ.
2. ದರಗುತ್ತಿಗೆ ಅವಧಿಯಲ್ಲಿ ಒಂದು ವೇಳೆ ಮಾರುಕಟ್ಟೆಯಲ್ಲಿ ಔಷಧಿ ಮತ್ತು ರಾಸಾಯನಿಕಗಳ ದರವು ಕಡಿಮೆಯಾದಲ್ಲಿ ಆ ದರಕ್ಕೆ ಗುತ್ತಿಗೆದಾರರು ಸರಬರಾಜು ಮಾಡಲು ಹಿಂಜರಿ ಯುತ್ತಾರೆ.
3. ದರಗುತ್ತಿಗೆದಾರರು ಉದ್ದೇಶಪೂರ್ವಕವಾಗಿಯೇ ಔಷಧಿ ಮತ್ತು ರಾಸಾಯನಿಕಗಳ ಕೃತಕ ಬೇಡಿಕೆ ಉಂಟಾಗುವಂತೆ ಸೃಜಿಸುತ್ತಾರೆ.
4. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ಅದರಡಿ ರಚಿಸಲಾದ ನಿಯಮಗಳಲ್ಲಿ ಟೆಂಡರ್ ಕರೆಯಲು ಅಧಿಸೂಚನೆ ಹೊರಡಿಸಿದಾಗ ನಿಗದಿಪಡಿಸಿದ್ದ ಔಷಧಿ ಮತ್ತು ರಾಸಾಯನಿಕಗಳ ಒಟ್ಟು ಪ್ರಮಾಣಕ್ಕಿಂತ ಹೆಚ್ಚಿಗೆ ಬೇಕಾಗಿದ್ದಲ್ಲಿ ಅಧಿಸೂಚಿಸಿರುವ ಪ್ರಮಾಣಕ್ಕಿಂತ ಶೇಕಡಾ 25 ರಷ್ಟನ್ನು ಮಾತ್ರ ಹೆಚ್ಚುವರಿಯಾಗಿ ಪಡೆಯಲು ಅವಕಾಶವಿದೆ. ದರಗುತ್ತಿಗೆ ಸಮಯದಲ್ಲಿ ಸದರಿ ಮಿತಿಯನ್ನು ಉಲ್ಲಂಘಿಸಿ ಸಂಗ್ರಹಿಸುವ ಪ್ರಮೇಯ ಬರುತ್ತದೆ.
5. ದರಗುತ್ತಿಗೆ ಆಹ್ವಾಸಿನಿ ಟೆಂಡರ್ ಕರೆದ ಸಮಯಕ್ಕೂ ವಾಸ್ತವವಾಗಿ ಸಂಗ್ರಹಣೆ ಮಾಡುವ ಕಾಲಕ್ಕೂ ಔಷಧಿ ಮತ್ತು ರಾಸಾಯನಿಕಗಳ ಸ್ಪೆಸಿಫಿಕೇಷನ್‌ನಲ್ಲಿ ಬದಲಾವಣೆ ಆಗುವ

ಕಾರಣ ಹಳೆಯ ಸ್ಪೆಸಿಫಿಕೇಷನ್ ಆಧಾರದ ಮೇಲೆ ದರ ಗುತ್ತಿಗೆಯಡಿ ಸಂಗ್ರಹಣೆ ಮಾಡುವುದು ಸೂಕ್ತವಾಗುವುದಿಲ್ಲ.

ಇ) ಕೆ.ಟಿ.ಪಿ.ಪಿ. ನಿಯಮನುಸಾರ ಟೆಂಡರ್ ಆಹ್ವಾನಿಸಿರುವುದರಿಂದ ಆಯಾ ವರ್ಷಕ್ಕೆ ಬೇಡಿಕೆಗೆ ಅನುಗುಣವಾಗಿ ನಿಗದಿತ ಪ್ರಮಾಣಕ್ಕೆ ತಕ್ಕಂತೆ ಸ್ಪರ್ಧಾತ್ಮಕ ಬೆಲೆಗೆ ಉತ್ತಮ ಗುಣಮಟ್ಟದ ಔಷಧಿಗಳನ್ನು ಪಡೆಯಬಹುದಾಗಿದೆ.

ಈ) ತೊಂದರೆಯಾಗಿರುವುದಿಲ್ಲ.

360 ಶ್ರೀ ರೋಷನ್ ಬೇಗ್ ಆರ್. (ಶಿವಾಜಿನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರಕಾರದಿಂದ ಔಷಧಿಗಳನ್ನು ಖರೀದಿಸಿ ರಾಜ್ಯದ ಸರಕಾರಿ ಆಸ್ಪತ್ರೆ ಮತ್ತು ಪ್ರಾಥಮಿಕ ಆಸ್ಪತ್ರೆಗಳಿಗೆ ಸರಬರಾಜು ಮಾಡಿದ ಮೊತ್ತವೆಷ್ಟು;

ಆ) ಔಷಧಿ ಖರೀದಿಗಾಗಿ ಕೇಂದ್ರ ಸರಕಾರದಿಂದ ಬಿಡುಗಡೆಯಾದ ಮೊತ್ತವೆಷ್ಟು;

ಇ) ಸರಕಾರಿ ಆಸ್ಪತ್ರೆ ಮತ್ತು ಪ್ರಾಥಮಿಕ ಆಸ್ಪತ್ರೆಗಳಿಗೆ ಸರಬರಾಜಿಗಾಗಿ ಔಷಧಿ ಖರೀದಿಸಿ ಖಾಸಗಿ ಔಷಧಿ ಮಳಿಗೆಯಲ್ಲಿ ಮಾರಾಟವಾಗುತ್ತಿರುವ ದೂರು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಈ ದೆಸೆಯಲ್ಲಿ ಸರಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯದ ವ್ಯಾಪ್ತಿಯಡಿ ಬರುವ ಸರ್ಕಾರಿ ಆಸ್ಪತ್ರೆಗಳು ಮತ್ತು ಆರೋಗ್ಯ ಕೇಂದ್ರಗಳಿಗೆ ಒಟ್ಟು 49.60 ಕೋಟಿ ಮೊತ್ತದ ಔಷಧಿಗಳನ್ನು ಖರೀದಿಸಿ ಪ್ರಸ್ತುತ ಸಾಲಿನಲ್ಲಿ ಸರಬರಾಜು ಮಾಡಲಾಗಿದೆ.

ಆ) ಕೇಂದ್ರ ಸರ್ಕಾರದ ಯೋಜನೆಯಾದ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಎನ್.ಆರ್.ಹೆಚ್.ಎಂ.) ಯೋಜನೆಯಡಿ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಅದರಲ್ಲಿ ಔಷಧಿಗಳ ಖರೀದಿಗೂ ಅವಕಾಶ ಮಾಡಲಾಗಿದೆ.